№ 000233

D-DTN-J-LBB

KANNADA
Paper II
(Literature)

Time Allowed : Three Hours | *Maximum Marks : 300*

INSTRUCTIONS

Candidates should attempt questions 1 and 5 which are compulsory, and any THREE of the remaining questions, selecting at least ONE question from each Section.

All questions carry equal marks.

Answers must be written in Kannada.

ವಿಭಾಗ ಅ

1. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪದ್ಯಗಳ ಸಂದರ್ಭವನ್ನು ಸೂಚಿಸಿ, ಅವುಗಳ ಭಾವ ಮತ್ತು ಸ್ವಾರಸ್ಯಗಳನ್ನು ಕುರಿತು ಬರೆಯಿರಿ : *20×3=60*

(a) ದಿವಿಜಾಧೀಶನ ಕೊಟ್ಟ ಶಕ್ತಿಯನದಂ ಕರ್ಣಂ ನರಂಗೆಂದು ಬ
ಯ್ತಿವನಿಂದಿಂದ ಱವೆಯ್ದಿ ವಂದೊಡದಱಿಂದಾತನಂ ಕೊಂದನಿ
ನ್ನಿವನಂ ಕೊಲ್ವುದು ಮೊಗ್ಗದರ್ಕಱಲವೇಡೆಂಬನ್ನಮತ್ತೇಱಿದಂ
ರವಿ ಪೂರ್ವಾಚಲಮಂ ನಿಜಾತ್ಮಜನ ಗೆಲ್ದುಗ್ರಾಜಿಯಂ
ನೋಲ್ಪಿವೋಲ್

Optional Province · optionalprovince.com

(b) ಅಳುಕಿದನೆ ರಥ ಮುಗ್ಗಿದರೆ ಕಳ
ವಳಿಸಿದನೆ ಶಲ್ಯಾಪಸರಣಕೆ
ಕೆಲ ಬಲನ ಹಾರಿದನೆ ನರನವಗಡಿಸಿ ಕಾದಿದಡೆ ।
ಬಲಿ ಮಥನ ಮರುಳು ಭಾಪು ಪಾಂಡವ
ಬಲ ದಿಶಾಪಟ ರಾಯ ಮದನ
ಪ್ರಳಯಹರ ಭಾಪೆಂದು ಹೊಗಳಿತು ವಂದಿ ಸಂದೋಹಂ ।।

(c) ಕಿಚ್ಚಿಲ್ಲದ ಬೀಗೆಯಲಿ ಬೆಂದೆನವ್ವಾ ।
ಏರಿಲ್ಲದ ಗಾಯದಲಿ ನೊಂದೆನವ್ವಾ ।
ಸುಖವಿಲ್ಲದೆ ಧಾವತಿ ಗೊಂಡೆನವ್ವಾ ।
ಚೆನ್ನಮಲ್ಲಿಕಾರ್ಜುನ ದೇವರಿಗೊಲಿದು
ಬಾರದ ಭವಂಗಳಲಿ ಬಂದೆನವ್ವಾ.

(d) ಒಳಗಿದ್ದ ದೇವ ಕಾಣದೆ ಹೊರಗೆ ದೇ
ಗುಲವ ಪೂಜಿಸುದೆಗ್ಗನಂತೆ
ಒಳಗಣಾತ್ಮವ ಬಿಟ್ಟು ಮೈಯನೆ ತಾನೆಂದು
ಸಲೆ ಹೊಗಳಿಸಿ ಕೊಳುತಿಹರು.

2. ಧರ್ಮ ಪ್ರಚಾರ ದೃಷ್ಟಿಯಿಂದ ಸುಕುಮಾರ ಸ್ವಾಮಿಯ ಕಥೆಯಲ್ಲಿ ಬಳಕೆಯಾಗಿರುವ ರಚನಾ ಕೌಶಲ ಮತ್ತು ತಂತ್ರಗಳನ್ನು ವಿವರಿಸಿರಿ. *60*

3. ಕರ್ಣನ ಪಾತ್ರದ ಶೌರ್ಯ, ತ್ಯಾಗ, ನಿಷ್ಠೆ, ದುರ್ವಿಧಿ ವಿಲಾಸ ಇವುಗಳನ್ನು ಚಿತ್ರಿಸುವಲ್ಲಿ ಕುಮಾರ ವ್ಯಾಸನು ಮೆರೆದಿರುವ ಪ್ರತಿಭಾ ವಿಲಾಸವನ್ನು ವಿವರಿಸಿರಿ. *60*

4. ನಂದಿಯಣ್ಣನ ರಗಳೆಯಲ್ಲಿ ಶೃಂಗಾರ-ಭಕ್ತಿಗಳ ಸಂಮಿಶ್ರ ಚಿತ್ರಣವು ಪಡೆದಿರುವ ಉನ್ನತಿಯನ್ನು ಚರ್ಚಿಸಿರಿ. *60*

Optional Province · optionalprovince.com

ವಿಭಾಗ ಬ

5. ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ (ಸುಮಾರು 200 ಪದಗಳಲ್ಲಿ) : *20×3=60*

   (a) ಒಡಲಾಳ ಕಾದಂಬರಿಯಲ್ಲಿ ಕ್ರೌರ್ಯ, ಶೋಷಣೆಗಳ ಚಿತ್ರಣದಲ್ಲಿ ಹಾಸ್ಯ ಲೇಪನ.

   (b) ತುಘಲಕ್ ನಾಟಕದಲ್ಲಿ ಸಮಕಾಲೀನತೆ.

   (c) "ನವೋದಯ ಕಾವ್ಯವು ಲೋಕೋತ್ತರ ನೆಲೆಯ ಭಾವದ ಪಕ್ಷಪಾತಿ" — ವಿವರಿಸಿ.

   (d) ಪೂರ್ಣಚಂದ್ರ ತೇಜಸ್ವಿ ಅವರ 'ಅಬಚೂರಿನ ಪೋಸ್ಟಾಫೀಸು' ಕತೆಯ ಮಹತ್ವ.

6. ಹೊಸಗನ್ನಡ ಕವಿತೆಯ ರೂಪರೇಖೆಯನ್ನು ನಿಮ್ಮ ಪಠ್ಯದ ಆಧಾರದಿಂದ ಉಲ್ಲೇಖಪೂರ್ವಕ ಚರ್ಚಿಸಿರಿ. *60*

7. ಕನ್ನಡ ಸಣ್ಣಕತೆಗಳ ಉದ್ದೇಶ, ಧೋರಣೆಗಳು ವಿವಿಧ ಘಟ್ಟಗಳಲ್ಲಿ ಹೇಗೆ ಮಾರ್ಪಾಟು ಪಡೆಯುತ್ತ ಬೆಳೆಯಿತು ? 'ಕನ್ನಡ ಸಣ್ಣಕತೆಗಳು' ಸಂಕಲನದ ಹಿನ್ನೆಲೆಯಲ್ಲಿ ಚರ್ಚಿಸಿರಿ. *60*

8. ಜಾನಪದ ಗೀತೆಗಳಲ್ಲಿ ಸಾಂಸಾರಿಕ ಗೀತೆಗಳು ಮತ್ತು ಪ್ರೇಮ ಗೀತೆಗಳಲ್ಲಿ ಚಿತ್ರಿತವಾಗಿರುವ ಹೆಣ್ಣಿನ ಬದುಕನ್ನು ಚರ್ಚಿಸಿರಿ. *60*

Optional Province · optionalprovince.com